


ತಾವು ನಿಂತ ಸ್ಥಳದಿಂದಲೇ ಸಾಲು ಆರಂಭವಾಗುತ್ತದೆ ಎಂದು ಅಂದಾಜಿಸಿ ಹಲವು ಸಾಲುಗಳನ್ನು ಶುರು ಮಾಡಿದ್ದರು. ಆದರೂ ಎಲ್ಲೊ ಯಾವ್ಯಾವುದೋ ತರ್ಕ ಮಾಡಿಕೊಂಡು, ಮತ್ತೇನೋ ವಿಚಾರ ತಾಳೆ ಹಾಕಿಕೊಂಡು ಯಾರದೋ ಒಬ್ಬರ ಹಿಂದೆ ನಿಂತೆ. ಯಾರೂ ವಿರೋಧಿಸಲಿಲ್ಲ. ಆಶ್ಚರ್ಯ ಎಂಬಂತೆ, ಹಾಗೆ ನಿಲ್ಲುತ್ತಿದ್ದಂತೆ, ನನ್ನ ಹಿಂದೆಯೇ ಜನ ಸಾಲುಗಟ್ಟಿ ನಿಲ್ಲಲಾರಂಭಿಸಿದ್ದು ಸಮಾಧಾನ ತಂದಿತು. 'ಛೇ... ಎಂತ ಕೆಲಸ ಮಾಡಿದೆ, ಯಾರ್‍ಯಾರೋ ಹೊಸದಾಗಿ ದೇಶ, ಕೋಶ, ಧರ್ಮ, ಪಂಥ ಏನೇನೋ ಶುರು ಮಾಡುತ್ತಾರೆ. ಬೇಗ ಬಂದಿದ್ದರೆ ನಾನು ಕೊನೇ ಪಕ್ಷ ಸಾಲೊಂದನ್ನು ಶುರು ಮಾಡಬಹುದಿತ್ತಲ್ಲ' ಎಂದು ಮರುಗಿದೆ. ಇರುವುದೆಲ್ಲ ಬಿಟ್ಟು ಇರದುದರೆಡೆ ತುಡಿಯುವುದೆ ಜೀವನ ಎಂದ ಅಡಿಗರು ನೆನಪಾದರು